ಕರ್ನಾಟಕ ಜಲಸಾರಿಗೆ ಮಂಡಳಿ
KARNATAKA MARITIME BOARD



ಮಾಸಿಕ ಮಾಹಿತಿ ಪತ್ರಿಕೆ
Monthly Newsletter

Volume 01 Issue 04
Aug-Sep 2024 Pages 08

KMB ಸುದ್ದಿ News

# 20ನೇ ಜಲಸಾರಿಗೆ ರಾಜ್ಯಗಳ ಅಭಿವೃದ್ಧಿ ಮಂಡಳಿಯ ಮಹತ್ವ ಸಭೆ


## 12.09.2024 ಮತ್ತು 13.09.2024 ರಂದು ಬೆನೌಲಿಮ್, ದಕ್ಷಿಣ ಗೋವಾ, ಕೇಂದ್ರ ಮತ್ತು ರಾಜ್ಯ ಸಚಿವರು ಭಾಗಿ




**ಜಲಸಾರಿಗೆ ವಲಯಾಭಿವೃದ್ಧಿಗೆ ಕಾರ್ಯತಂತ್ರದ ಕ್ರಮಗಳ ಬಗ್ಗೆ ಚರ್ಚಿಸಲು ಜಲಸಾರಿಗೆ ರಾಜ್ಯ ಅಭಿವೃದ್ಧಿ ಮಂಡಳಿಯ (ಎಂಎಸ್‌ಡಿಸಿ) ಸದಸ್ಯರು ವೇದಿಕೆಯಲ್ಲಿ ಕಾಣಿಸಿಕೊಂಡರು.**

**ಕೆ.ಎಂ.ಬಿ ಸುದ್ದಿ ಗೋವಾ:** 20 ನೇ ಜಲಸಾರಿಗೆ ರಾಜ್ಯಗಳ ಅಭಿವೃದ್ಧಿ ಮಂಡಳಿ (ಎಂಎಸ್ ಡಿಸಿ) ಸಭೆ 2024 ರ ಸೆಪ್ಟೆಂಬರ್ 12 ಮತ್ತು 13 ರಂದು ದಕ್ಷಿಣ ಗೋವಾದ ಬೆನೌಲಿಮ್ ನಲ್ಲಿ ನಡೆಯಿತು. ಇದು ನಮ್ಮ ದೇಶದ ಜಲಸಾರಿಗೆ ಕ್ಷೇತ್ರದ ಪ್ರಮುಖ ಸಮಸ್ಯೆಗಳ ಚರ್ಚೆ ಮತ್ತು ಪರಿಹಾರಕ್ಕೆ ನಿರ್ಣಾಯಕ ವೇದಿಕೆಯಾಗಿತ್ತು.

ಎರಡು ದಿನಗಳ ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವರಾದ ಶ್ರೀ ಸರ್ಬಾನಂದ ಸೋನೊವಾಲ್ ಜೀ ಮತ್ತು ಕೇಂದ್ರ ಸರ್ಕಾರದ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ರಾಜ್ಯ ಸಚಿವ ಶ್ರೀ ಶಂತನು ಠಾಕೂರ್ ಜೀ, ಕೇಂದ್ರ ಸರ್ಕಾರದ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಕಾರ್ಯದರ್ಶಿ ಶ್ರೀ ಟಿ.ಕೆ. ರಾಮಚಂದ್ರನ್ ಜೀ ಮತ್ತು ಆಯಾ ಜಲಸಾರಿಗೆ ರಾಜ್ಯಗಳ ಸಚಿವರು ಉದ್ಘಾಟಿಸಿದರು.



ಕಾರ್ಯಕ್ರಮ ಉದ್ಘಾಟನೆ ಬಳಿಕ ಮಾತನಾಡಿದ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರಾದ ಶ್ರೀ ಮಂಕಲ್ ಎಸ್ ವೈದ್ಯ ಜೀ ಅವರು, ಸಾಗರಮಾಲಾ ಯೋಜನೆಗಳು, ಕಡಲತೀರ ನಿರ್ವಹಣಾ ಯೋಜನೆ ಮತ್ತು ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯ ಕ್ರಮಗಳು ಸೇರಿದಂತೆ ಕರ್ನಾಟಕದ ಜಲಸಾರಿಗೆ ವಲಯದ ಅಭಿವೃದ್ಧಿಯ ಸಮಗ್ರ ಬಗ್ಗೆ ಮಾಹಿತಿ ನೀಡಿದರು.

ಮಾನ್ಯ ಸಚಿವರು, ಮಂಗಳೂರು ಅಂತರರಾಷ್ಟ್ರೀಯ ಕ್ರೂಸ್ ಮತ್ತು ಪ್ರವಾಸೋದ್ಯಮ ಬಂದರಿನ ಅಭಿವೃದ್ಧಿಯ ಬಗ್ಗೆ ಪ್ರಸ್ತಾಪಿಸಿದ್ದು, ಮತ್ತು ಕರ್ನಾಟಕ ಜಲಸಾರಿಗೆ ಮಂಡಳಿ ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ಸವಾಲುಗಳ ಹಾಗೂ ಸಂಭಾವ್ಯ ಮಧ್ಯಪ್ರವೇಶಕ್ಕಾಗಿ ಎಂಒಪಿಎಸ್ ಡಬ್ಲ್ಯೂಗೆ ಮನವಿ ಸಲ್ಲಿಸಿ, ಮಾತಿಗೆ ವಿರಾಮ ನೀಡಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯದಿಂದ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರಾದ ಶ್ರೀ ಮಂಕಲ್ ಎಸ್ ವೈದ್ಯ ಜೀ, ಐಡಿಪಿ ಮತ್ತು ಐಡಬ್ಲ್ಯೂಟಿ ಕಾರ್ಯದರ್ಶಿ ಡಾ.ಎನ್.ಮಂಜುಳಾ, ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಜಯರಾಮ್ ರಾಯ್ ಪುರ, ಬಂದರುಗಳ ನಿರ್ದೇಶಕ ಕ್ಯಾಪ್ಟನ್ ಸ್ವಾಮಿ ಮತ್ತು ಹಲವಾರು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.


KMB News - Published & printed by Chief Executive Officer, Karnataka Maritime Board, 3rd Floor, West Gate, Khanija Bhavan, Rebel Star Ambareesh Road, (Race Course Road), Bengaluru-560001 | Ph: 080-29577444 | Email: ceokmb2019@gmail.com

# ದಾರ್ಶನಿಕ ಎಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯ

## ಕೆ.ಎಂ.ಬಿ ಕಛೇರಿಯಲ್ಲಿ ಇಂಜಿನಿಯರ್ಸ್ ದಿನಾಚರಣೆ – ಕೆಎಂಬಿ ಸಿಇಒ ಅಭಿಮತ




**ಕೆ.ಎಂ.ಬಿ ಸುದ್ದಿ ಬೆಂಗಳೂರು:** ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದ ಮೂರನೇ ಮಹಡಿಯಲ್ಲಿ ಎಸ್.ಎಂ ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಜಯರಾಮ್ ರಾಯ್ ಪುರ ಅವರು ಮಾಲಾರ್ಪನೆ ಮಾಡುವ ಮೂಲಕ ಇಂಜಿನಿಯರ್ಸ್ ಡೇ ಯನ್ನು ಆಚರಿಸಿದರು.

ಬಳಿಕ ಮಾತನಾಡಿದ ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಜಯರಾಮ್ ರಾಯ್ ಪುರ ಅವರು, ಸರ್.ಎಂ.ವಿಶ್ವೇಶ್ವರ ಅವರ ಜೀವನಗಾಥೆಯನ್ನ ಮೆಲುಕು ಹಾಕಿದರು.

ಸರ್.ಎಂ.ವಿಶ್ವೇಶ್ವರಯ್ಯ ಅವರು ಚಿಕ್ಕ ವಯಸ್ಸಿನಲ್ಲೇ ಮೇಧಾವಿಯಾಗಿದ್ದರಿಂದ ಬ್ರಿಟಿಷರು ಅವರನ್ನು ಕಾರಚಿಯ ವಾಟರ್ ಮೆಟ್ರೋ ವಿಭಾಗಕ್ಕೆ ಕಳುಹಿಸಿಕೊಡಲು ಮುಂದಾಗುತ್ತಾರೆ. ಆದರೆ ಅಲ್ಲಿಗೆ ವಿಶ್ವೇಶ್ವರಯ್ಯ ಅವರು ಹೆಚ್ಚಿನ ಹಣ ನೀಡಿದರೆ ಮಾತ್ರ ಅಲ್ಲಿಗೆ ಹೋಗುತ್ತೇನೆ ಎಂದು ಬ್ರಿಟಿಷರ್ ಅಧಿಕಾರಿಗಳಿಗೆ ಷರಾ ಹಾಕಿ, ಹಲವಾರು ಕೆಲಸ ಕಾರ್ಯಗಳು ಯಶಸ್ವಿಗೊಳ್ಳಿಸುತ್ತಿದ್ದಂತೆ ಬೇರೆ ಬೇರೆ ಕಡೆಗಳಲ್ಲಿ ಅವರಿಗೆ ತುಂಬಾ ಅವಕಾಶಗಳು ಸಿಗುತ್ತೆ. ಹೀಗೆ ತವರು ರಾಜ್ಯದಲ್ಲಿಯೂ ಸಹ ಅವಕಾಶ ಸಿಗುತ್ತಿದಂತೆ ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಮುಖ್ಯ ಇಂಜಿನಿಯರ್ ಆಗಿ ನೇಮಕಗೊಂಡು ಕೃಷ್ಣ ರಾಜ ಸಾಗರ ಅಣೆಕಟ್ಟನ್ನು ಒಳಗೊಂಡಂತೆ ಹಲವಾರು ಸಾಂಪ್ರದಾಯಿಕ ರಚನೆಗಳನ್ನು ವಿನ್ಯಾಸಗೊಳಿಸಿ, ನಿರ್ಮಿಸಿದರು. ಇದು ಪ್ರದೇಶದ ದೊಡ್ಡ ಪ್ರದೇಶಗಳಿಗೆ ನೀರಾವರಿ ಮಾಡಲು ಮತ್ತು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡಿದರು ಎಂದು ತಿಳಿಸಿದರು.

## ಸರ್ ಎಂ.ವಿ. ಅವರ ಸಾಧನೆಗಳು

ಕೃಷ್ಣರಾಜಸಾಗರದ ನಿರ್ಮಾಣ, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಚೇರ್ಮನ್ನರಾಗಿ ಅದರ ಅಭಿವೃದ್ಧಿಗೆ ಕೊಡುಗೆ, ಮೈಸೂರು ಸಾಬೂನು ಕಾರ್ಖಾನೆಯ ಸ್ಥಾಪನೆ, ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆ, ಮೈಸೂರು ಬ್ಯಾಂಕ್ ಸ್ಥಾಪನೆ, ಮೈಸೂರು ಮತ್ತು ಬೆಂಗಳೂರಿನಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ, ಮೈಸೂರು ಚೇಂಬರ್ ಆಫ್ ಕಾಮರ್ಸ್ ಸ್ಥಾಪನೆ, ಶಿಂಷಾದಲ್ಲಿ ವಿದ್ಯುತ್ ಉತ್ಪಾದನೆ, ಬೆಂಗಳೂರಿನ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರಿನ ಸೆಂಚುರಿ ಕ್ಲಬ್, ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ತರಬೇತಿ ಸಂಸ್ಥೆಯ ಸ್ಥಾಪನೆ ಸೇರಿದಂತೆ ಅನೇಕ ಸಾಧನೆಗಳು ಮಾಡಿದ್ದಾರೆ.

# ಬಂದರು ಇಲಾಖೆ ಪರಿಶೀಲನಾ ಸಭೆ: ಅನುದಾನ ಬಿಡುಗಡೆಗೆ ಮನವಿ

**ಕೆ.ಎಂ.ಬಿ ಸುದ್ದಿ ಬೆಂಗಳೂರು:** ಸಾಗರಮಾಲಾ ಯೋಜನೆಗೆ ರಾಜ್ಯದ ಪಾಲಿನ ಹಣ ಬಿಡುಗಡೆಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯರಾಮ್ ರಾಯ್ ಪುರ ಅವರು ಮನವಿ ಸಲ್ಲಿಸಿದರು.

ನಗರದ ವಿಕಾಸ ಸೌಧ 2ನೇ ಮಹಡಿಯಲ್ಲಿ ನಡೆದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಕಾಂಕ್ಷಿಯಾದ ಯೋಜನೆಯಾದ ಸಾಗರಮಾಲಾ ಯೋಜನೆಯಾಗಿದ್ದು, ಕೇಂದ್ರ ಸರ್ಕಾರ ಈ ಯೋಜನೆಗೆ ಅನುದಾನ ಬಿಡುಗಡೆ ಗ್ರೀನ್ ಸಿಗ್ನಲ್ ನೀಡಿದ್ದರಿಂದ ರಾಜ್ಯ ಸರ್ಕಾರ ಅದಷ್ಟು ಬೇಗ ಅನುದಾನ ಬಿಡುಗಡೆಗೊಳಿಸುವಂತೆ ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಾಂಕಳ ಎಸ್. ವೈದ್ಯ ಅವರಿಗೆ ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು ಒತ್ತಾಯಿಸಿದ್ದು, ಇದಕ್ಕೆ ಸಚಿವರು ಸಹ ಗ್ರೀನ್ ಸಿಗ್ನಲ್ ನೀಡಿದ್ದಾರೆ.

ಹೀಗಾಗಲೇ ಕರಾವಳಿ ಪ್ರದೇಶದಲ್ಲಿ ಕಡಲ ಕೊರತೆ ಉಂಟಾಗಿದ್ದು, ಮೀನುಗಾರಿಕೆ ರಸ್ತೆ, ಶಾಲಾ ಕಟ್ಟಡಗಳು, ಜನವಸತಿ ಮನೆ ಮತ್ತು ಧಾರ್ಮಿಕ ಕಟ್ಟಡ ಇತ್ಯಾದಿ ಸಾರ್ವಜನಿಕ ಆಸ್ತಿಗಳನ್ನು ಸಮುದ್ರ ಕೊರೆತಯಿಂದ ಸಂರಕ್ಷಿಸಲು ಗ್ರಾನೈಟ್ ಕಲ್ಲಿನ ಶಾಶತ್ವ / ತಾತ್ಕಾಲಿಕ ಸಮುದ್ರ ಕೊರೆತ ತಡೆಗೋಡೆ ನಿರ್ಮಿಸಲಾಗುತ್ತಿದ್ದು, ಇದಕ್ಕೆ ಸರಿಸುಮಾರು 15 ಕೋಟಿ ಅನುದಾನ ಬಿಡುಗಡೆಗೊಳಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಇನ್ನು ಇದೇ ವೇಳೆ ಕರ್ನಾಟಕದ ಕಿರು ಬಂದರುಗಳಿಂದ ಕಬ್ಬಿಣದ ಅದಿರಿನ ರಫ್ತು ನಿಷೇಧವನ್ನು ಹಿಂತೆಗೆದುಕೊಳ್ಳುವಂತೆ ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯದರ್ಶಿ ಡಾ.ಎನ್ ಮಂಜುಳ ಅವರಿಗೆ ಜಯರಾಮ್ ರಾಯ್ ಪುರ ಅವರು ಮನವಿ ಸಲ್ಲಿಸಿದರು.

ತದಡಿ ಬಂದರು ಯೋಜನೆ ಮತ್ತು ತದಡಿ ಪೋರ್ಟ್ ಲಿಮಿಟೆಡ್ ಕಂಪನಿಯನ್ನು ರಾಜ್ಯ ಸರ್ಕಾರದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ವರ್ಗಾಯಿಸುವಂತೆ ಈ ಹಿಂದೆ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆ.ಎಂ.ಬಿ ಸಿಇಒ ಜಯರಾಮ್ ರಾಯ್ ಪುರ ಅವರು ಮನವಿ ಸಲ್ಲಿಸಲಾಯಿತ್ತು. ಇದಕ್ಕೆ ಕಾರ್ಯದರ್ಶಿ ಮತ್ತು ಸಚಿವರು ಸಕರಾತ್ಮಕವಾಗಿ ಸ್ಪಂಧಿಸಿದರು.

ಇದರ ಜೊತೆಗೆ ಕರ್ನಾಟಕ ರಾಜ್ಯಕ್ಕೆ ಅನುಮೋದಿಸಲಾದ ಸಾಗರಮಾಲಾ ಯೋಜನೆಗಳಿಗೆ ಪೂರ್ವಸಿದ್ಧತಾ ಅಧ್ಯಯನ ಮತ್ತು ಸಿ.ಆರ್.ಜೆಡ್ ಕ್ಲಿಯರೆನ್ಸ್ ಯೋಜನೆಗೆ ಐದು ಕೋಟಿ ಹಣ ಬಿಡುಗಡೆಗೊಳಿಸುವಂತೆ ಕೆ.ಎಂ.ಬಿ ಸಿಇಒ ಅವರು ಸರ್ಕಾರಕ್ಕೆ ಒತ್ತಾಯಿಸಿದ್ದು, ಇದಕ್ಕೆ ಸಚಿವರು ಅನುಮತಿ ನೀಡಿದರು.



# ಸಚಿವರ ನೇತೃತ್ವದಲ್ಲಿ ಎನ್ ಸಿಎಸ್ ಸಿಎಮ್ ಸಭೆ, ಕೆಎಂಬಿ ಸಿಇಒ ಭಾಗಿ



**ಕೆ.ಎಂ.ಬಿ ಸುದ್ದಿ ಬೆಂಗಳೂರು:** ರಾಜ್ಯದ ಕರಾವಳಿ ತೀರದ ನಿರ್ವಹಣಾ ಯೋಜನೆ ತಯಾರಿಸಲು ಚೆನ್ನೈನ ಸುಸ್ಥಿರ ಕರಾವಳಿ ನಿರ್ವಹಣೆಗಾಗಿ ರಾಷ್ಟ್ರೀಯ ಕೇಂದ್ರಕ್ಕೆ (ಎನ್ ಸಿಎಸ್ ಸಿಎಮ್) ವಹಿಸಲಾಗಿದೆ ಎಂದು ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯರಾಮ್ ರಾಯ್ ಪುರ ಅವರು ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರಾದ ಮಂಕಾಳ ಎಸ್ ವೈದ್ಯ ಅವರಿಗೆ ತಿಳಿಸಿದರು.

ನಗರದ ವಿಧಾನಸೌಧ ಎರಡನೇ ಮಹಡಿಯಲ್ಲಿರುವ ಮಂಕಾಳ ಎಸ್ ವೈದ್ಯರ ಕಚೇರಿಯಲ್ಲಿ ನಡೆದ ಕರಾವಳಿ ತೀರದ ನಿರ್ವಹಣಾ ಯೋಜನೆ ಕುರಿತು ಮಾಹಿತಿ ನೀಡಿದರು.

ಕರಾವಳಿ ತೀರದ ನಿರ್ವಹಣಾ ಯೋಜನೆಯ ಬಗ್ಗೆ ಮೊದಲನೇ ಕರಡು ಹಾಗೂ ಎರಡನೇ ಕರಡು ವರದಿಯನ್ನು ಸಲ್ಲಿಸಿದ್ದು, ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಇಲಾಖೆಯವರು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಬಗ್ಗೆ ಸಭೆಯೂ ಸಹ ನಡೆಸಿರುತ್ತಾರೆ. ಈ ಬಗ್ಗೆ ಅಂತಿಮ ವರದಿ ಸಹ ತಯಾರಿಕೆ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಚೆನ್ನೈನ ಸುಸ್ಥಿರ ಕರಾವಳಿ ನಿರ್ವಹಣೆಗಾಗಿ ರಾಷ್ಟ್ರೀಯ ಕೇಂದ್ರದವರು ಸಲ್ಲಿಸುತ್ತಾರೆ ಎಂದು ಸಚಿವರಿಗೆ ತಿಳಿಸಿದರು.

ಸಾಗರಮಾಲಾ ಯೋಜನೆ ಅಡಿಯಲ್ಲಿ ಬರುವ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿ–ಅಘನಾಶಿನಿ ಜಲಮಾರ್ಗದ ಸಮಗ್ರ ಅಭಿವೃದ್ಧಿ, ಕಾರವಾರ ಬಂದರಿನ 2ನೇ ಹಂತದ ಅಭಿವೃದ್ಧಿ ಹಾಗೂ ಉಡುಪಿ ತಾಲೂಕಿನ ಹಂಗರಕಟ್ಟೆಯಲ್ಲಿ ಕರಾವಳಿ ಬೆರ್ತ್ ನಿರ್ಮಾಣ, ಬೈಂದೂರು ತಾಲೂಕಿನ ಗಂಗೊಳಿಯಲ್ಲಿ ಕರಾವಳಿ ಬೆರ್ತ್ ನಿರ್ಮಾಣ ಮತ್ತು ಹಳೆ ಮಂಗಳೂರು ಬಂದರಿನಲ್ಲಿ ಸಂಬಂಧಿತ ಮೂಲ ಸೌಕರ್ಯ ಸೌಲಭ್ಯಗಳೊಂದಿಗೆ ಲಕ್ಷದ್ವೀಪಕ್ಕೆ ಮೀಸಲಾದ ಜೆಟ್ಟಿ ಅಭಿವೃದ್ಧಿಗೆ ಸಂಬಂಧಿಸಿದ ನಾನಾ ವಿಚಾರಗಳ ಬಗ್ಗೆ ಸಚಿವ ಮಂಕಾಳ ಎಸ್ ವೈದ್ಯರಿಗೆ ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಪೂರ್ಣವಾಗಿ ಮಾಹಿತಿ ನೀಡಿದ್ದಾರೆ.

ನಾಡದೋಣಿ ಹಾಗೂ ಬೋಟ್ ಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳು ಒದಗಿಸಲಾಗುತ್ತಿದ್ದು, ಇದಕ್ಕೆ ಸರ್ಕಾರದಿಂದ ಅನುದಾನ ನೀಡುವಂತೆ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಸಚಿವರಿಗೆ ಮನವಿ ಸಲ್ಲಿಸಿದರು.

# ಬೈಂದೂರು, ಕಾಳಿ ನದಿಗಳಿಗೆ ಸೀಪ್ಲೇನ್ ಸೌಲಭ್ಯಗಳಿಗೆ ಆದ್ಯತೆ

**ಕೆ.ಎಂ.ಬಿ ಸುದ್ದಿ ಬೆಂಗಳೂರು:** ನಗರದ ವಿಕಾಸಸೌಧ ನೆಲದ ಮಹಡಿಯಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ವತಿಯಿಂದ ನಡೆದ ಮಂಗಳೂರು, ಮಲ್ಪಿ, ಬೈಂದೂರು ಹಾಗೂ ಕಾಳಿ ನದಿಗಳಿಗೆ ಸೀಪ್ಲೇನ್ ಸೌಲಭ್ಯಗಳು ಮತ್ತು ಪೂರಕ ಮೂಲ ಸೌಕರ್ಯಗಳ ಅಭಿವೃದ್ಧಿಯ ಕುರಿತು ಚರ್ಚಿಸಿ, ಮುಂದಿನ ಕಾರ್ಯತಂತ್ರಗಳನ್ನು ರೂಪಿಸಲು ಮಹತ್ವ ಸಭೆ ನಡೆಯಿತು.

ಸಭೆಯಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯದರ್ಶಿ ಡಾ. ಎನ್ ಮಂಜುಳಾ ಅವರು ಮಾತನಾಡಿ, ಮಂಗಳೂರು, ಮಲ್ಪಿ, ಬೈಂದೂರು ಹಾಗೂ ಕಾಳಿ ನದಿಗಳಿಗೆ ಸೀಪ್ಲೇನ್ ಸೌಲಭ್ಯ ಮತ್ತು ಪೂರಕ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ರೀತಿಯಾಗಿ ಕ್ರಮ ತೆಗೆದುಕೊಂಡು ಅಭಿವೃದ್ಧಿ ಆದ್ಯತೆ ನೀಡಲಾಗುವುದು. ಜೊತೆಗೆ ನದಿಗಳಲ್ಲಿ ವಿಮಾನ ನಿಲ್ದಾಣ ಹಾಗೂ ಸಮುದ್ರದ ಏರೋಪ್ಲೇನ್ ಬಂದರುಗಳ ವ್ಯವಸ್ಥೆಯನ್ನು ಕರ್ನಾಟಕ ಜಲಸಾರಿಗೆ



ಮಂಡಳಿಗೆ ವಹಿಸಲಾಗಿದೆ ಎಂದು ತಿಳಿಸಿದರು. ಸಾಗರಮಾಲಾ ಯೋಜನೆಗೆ ರಾಜ್ಯ ಸರ್ಕಾರ ಹೆಚ್ಚು ಮಹತ್ವ ನೀಡಿ, ಅದಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಯರಾಮ್ ರಾಯ್ ಪುರ ಅವರು ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳ ಅವರಿಗೆ ಮನವಿ ಸಲ್ಲಿಸಿದ್ದು, ಇದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು.

# ಕಡಲ ಕೊರೆತ ಸ್ಥಳಗಳಿಗೆ ಕೆ.ಎಂ.ಬಿ ಸಿಇಒ ಜಯರಾಮ್ ರಾಯ್ ಪುರ ಭೇಟಿ





**ಕೆ.ಎಂ.ಬಿ ಸುದ್ದಿ ಕಾರವಾರ:** ಕರಾವಳಿ ಜಿಲ್ಲೆಯಲಿ ಕಡಲ ಕೊರತೆ ತೀವ್ರವಾಗಿದ್ದು, ಸಮುದ್ರ ಭಾಗದಲ್ಲಿ ವಾಸಿಸುತ್ತಿರುವ ಜನರಲ್ಲಿ ಆತಂಕ ಮನೆ ಮಾಡಿದೆ. ಕಡಲ ಕೊರೆತ ಸಮಸ್ಯೆಯ ಹಾನಿಗೆ ತಡೆಗಟ್ಟಲು ಸರ್ಕಾರದಿಂದ ಶಾಶ್ವತವಾದ ಪರಿಹಾರ ನೀಡುವ ನಿಟ್ಟಿನಲ್ಲಿ ಯೋಜನೆಯನ್ನು ಅದಷ್ಟು ಬೇಗ ಕಂಡುಕೊಳ್ಳಲಿದೆ ಎಂದು ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಜಯರಾಮ್ ರಾಯ್ ಪುರ ಅವರು ತಿಳಿಸಿದರು.

ನಗರದ ಮಾಜಾಳಿ, ಸದಾಶಿವಗಡ ಮತ್ತು ಹಾರವಾಡದ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಸ್ಥಳೀಯ ಅಧಿಕಾರಿಗಳಿಗೆ ಇದಕ್ಕೆ ಪರಿಹಾರ ಕಂಡುಕೊಳ್ಳುವಂತೆ ಸಲಹೆ ನೀಡಿದರು.

ಕರಾವಳಿ ದಿನೇ ದಿನೇ ಕಡಲ ಕೊರೆತ ಹೆಚ್ಚಾಗುತ್ತಿರುವ ಕಾರಣ ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಅವರು ಕಡಲ ಕೊರೆತ ಸ್ಥಳಗಳಿಗೆ ಭೇಟಿ ನೀಡಿ, ಪರಿಹಾರ ಕಂಡುಕೊಳ್ಳಲು ಮುಂದಾಗಿದ್ದಾರೆ. ಜೊತೆಗೆ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಂಡು, ಸ್ಥಳೀಯರಿಗೆ ಅನುಕೂಲಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

# ಮಂಗಳೂರಿನಲ್ಲಿ ಕಡಲ ಕೊರೆತ: ಕೆ.ಎಂ.ಬಿ ಸಿಇಒ ಭೇಟಿ

**ಕೆ.ಎಂ.ಬಿ ಸುದ್ದಿ ಮಂಗಳೂರು:** ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ಮಳೆ ತೀವ್ರವಾಗಿದ್ದು, ಸುಮಾರು 13 ಸಮುದ್ರದ ಪ್ರದೇಶಗಳಲ್ಲಿ ಕಡಲ ಕೊರತೆ ಉಂಟಾಗಿದ್ದು, ನೂರಾರು ಜನ– ಜೀವನ ಅಸ್ತವ್ಯಸ್ತಗೊಂಡಿದ್ದು, ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಯರಾಮ್ ರಾಯ್ ಪುರ ಅವರು ಭೇಟಿ ನೀಡಿ, ಸೂಕ್ತ ರೀತಿ ಕ್ರಮಕೈಗೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸಮುದ್ರ ಕಡಲ ಕೊರೆತ ಬಾಧಿತ ಪ್ರದೇಶಗಳಾದ ಉಳ್ಳಾಲ ತಾಲೂಕು ಮೊಗವೀರಪಟ್ನ, ಬಟ್ಟಪ್ಪಾಡಿ ಪ್ರದೇಶದ ಸರಪಳಿ, ಉಚ್ಚಿಲ ಪ್ರದೇಶದ ಸರಪಳಿ ಹಾಗೂ ಸೀಗ್ರೌಂಡ್ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೊಗವೀರಪಟ್ನ ಪ್ರದೇಶದಲ್ಲಿ ಎಡಿಬಿ ಯೋಜನೆಯಡಿ ಬರ್ಮ್ ಗಳನ್ನು ನಿರ್ಮಾಣ ಮಾಡಲಾಗಿದ್ದು, ಅಬ್ಬರ ಅಲೆಗಳಿಂದ ತಡೆಗೋಡೆಯು ಕುಸಿದಿದೆ. ಹೀಗಾಗಿ ಮತ್ತೆ ಅದಷ್ಟು ಬೇಗ ಬರ್ಮ್ ಗಳ ಮಧ್ಯೆ ತಡೆಗೋಡೆಯನ್ನು ನಿರ್ಮಾಣ ಮಾಡುವಂತೆ ಸ್ಥಳೀಯ ಸತೀಶ್ ಕುಂಪಲ ಅವರು ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಇನ್ನು ಇತ್ತ ಉಳ್ಳಾಲ ತಾಲೂಕು ಸೀಗ್ರೌಂಡ್ ಪ್ರದೇಶದಲ್ಲಿ ಸಮುದ್ರ ಕೊರೆತ ಉಂಟಾಗುತ್ತಿದ್ದು, ಕರ್ನಾಟಕ ಮಂಡಳಿಯ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಸ್ಥಳೀಯರು ನೀಡಿರುವ ಮಾಹಿತಿಯಂತೆ ಮುಕ್ಕಚ್ಚೇರಿ ಪ್ರದೇಶದಲ್ಲಿ ಎಡಿಬಿ ಯೋಜನೆಯಡಿಯಲ್ಲಿ ಟೇಟ್ರಾ ಪೋಡ್ ಗಳು ಕಾಂಕ್ರೀಟನಿಂದ ಮಾಡಿರುವ ತಡೆಗೋಡೆ ಕುಸಿದಿದ್ದು, ಇದನ್ನು ಅದಷ್ಟು ಬೇಗ ಮತ್ತೆ ತಡೆಗೋಡೆ ನಿರ್ಮಿಸುವಂತೆ ಸ್ಥಳೀಯರೊಬ್ಬರು ಕೆ.ಎಂ.ಬಿ ಸಿಇಓ ಅವರಿಗೆ ಮನವಿ ಮಾಡಿದರು.



ಉಳ್ಳಾಲ ತಾಲೂಕು ಸೋಮೇಶ್ವರ ಪುರಸಭಾ ವ್ಯಾಪ್ತಿಯ ಬಟ್ಟಪ್ಪಾಡಿ ಸಮುದ್ರ ಕೊರತೆಯಿಂದ ರಸ್ತೆ ಸಂಪರ್ಕ ಮತ್ತಷ್ಟು ಕಡಿತಗೊಂಡಿದ್ದು, ಜೊತೆಗೆ ಇದರ ಹಿಂಭಾಗದ 4–5 ಮನೆಗಳು ಅಪಾಯದ ಅಂಚಿನಲ್ಲಿದೆ. ಈ ಬಗ್ಗೆ ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಯರಾಮ್ ರಾಯ್ ಪುರ ಅವರು ಮಾಹಿತಿ ಪಡೆದು ಸ್ಥಳೀಯ ಅಧಿಕಾರಿಗಳಿಗೆ ಪರಿಹಾರಕಂಡುಕೊಳ್ಳುವಂತೆ ಸೂಚಿಸಿದರು.

**ಎಲ್ಲಲ್ಲಿ ಭೇಟಿ**

- **ಮೊಗವೀರಪಟ್ನ, ಸೀಗ್ರೌಂಡ್ ಪ್ರದೇಶ**
- **ಸೋಮೇಶ್ವರ ಪ್ರದೇಶ**
- **ಬಟ್ಟಪ್ಪಾಡಿ ಪ್ರದೇಶ**
- **ಉಚ್ಚಿಲ ಪ್ರದೇಶ**

## ನಡಿಪಟ್ಲ ಕಡಲ ಪ್ರದೇಶಕ್ಕೆ ಡಾ.ಎನ್ ಮಂಜುಳಾ ಅವರು ಭೇಟಿ

**ಕೆ.ಎಂ.ಬಿ ಸುದ್ದಿ ಉಡುಪಿ:** ಜಿಲ್ಲೆಯ ಕಾಪು ತಾಲೂಕಿನ ನಡಿಪಟ್ಲ ಕಡಲ ಪ್ರದೇಶಕ್ಕೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯದರ್ಶಿ ಡಾ. ಎನ್ ಮಂಜುಳಾ ಅವರು ಭೇಟಿ ನೀಡಿದರು. ಇನ್ನು ಕಡಲಕೊರತೆ ಬಗ್ಗೆ ಸ್ಥಳೀಯರೊಂದಿಗೆ ಮತ್ತು ಬಂದರು ಅಧಿಕಾರಿಗಳೊಂದಿಗೆ ಮಾಹಿತಿ ಪಡೆದು ಕಡಲಕೊರತೆ ಸಮಸ್ಯೆ ಬಗ್ಗೆ ಅದಷ್ಟು ಬೇಗ ಪರಿಹಾರಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ.



# ಭಾರತ್ ಸಾಗರ ಸಮೀಕ್ಷೆ ಮತ್ತು ಪ್ರಮಾಣೀಕರಣ ಹಾಗೂ ನಿರ್ಮಾನ್ ಮರೈನ್ ಸೊಲ್ಯೂಷನ್ಸ್ ಎಲ್ ಎಲ್ ಪಿಯಿಂದ ತರಬೇತಿ ಕಾರ್ಯಾಗಾರ

**ಕೆ.ಎಂ.ಬಿ ಸುದ್ದಿ ಕಾರವಾರ:** ಪ್ರಮುಖ ಜಲಸಾರಿಗೆ ಸಲಹಾ ಸಂಸ್ಥೆಯಾದ ಭಾರತ್ ಮೆರೈನ್ ಸರ್ವೇ ಅಂಡ್ ಸರ್ಟಿಫಿಕೇಷನ್ ಅಂಡ್ ನಿರ್ಮಾನ್ ಮೆರೈನ್ ಸೊಲ್ಯೂಷನ್ಸ್ ಎಲ್ ಎಲ್ ಪಿ ಇತ್ತೀಚೆಗೆ ಕಾರವಾರ ಬಂದರು ಕಚೇರಿಯಲ್ಲಿ ತರಬೇತಿ ಕಾರ್ಯಾಗಾರವನ್ನು ನಡೆಸಿತು. ಇದು ಕರ್ನಾಟಕದ ಬಂದರು ಅಧಿಕಾರಿಗಳಿಗೆ ಒಳನಾಡಿನ ಹಡಗು (IV) ನಿಯಮಗಳು ಮತ್ತು ಕಾಯ್ದೆಗಳ ಅನುಷ್ಠಾನದ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ನೀಡುವ ಗುರಿಯನ್ನು ಹೊಂದಿದೆ. ಅಸ್ತಿತ್ವದಲ್ಲಿರುವ ಹಡಗುಗಳ ಮೇಲೆ ಖಗಿ ನಿಯಮಗಳು 2021 ರ ಪರಿಣಾಮವನ್ನು ಪರಿಹರಿಸಲು, ಸಮೀಕ್ಷೆ ಮತ್ತು ನೋಂದಣಿಗಾಗಿ ಶಿಫಾರಸು ಪ್ರಕ್ರಿಯೆಯ ಬಗ್ಗೆ ಮಾರ್ಗದರ್ಶನ ನೀಡಲು ಮತ್ತು ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಮುಂಬರುವ ಅಧಿಸೂಚನೆಗಳನ್ನು ರೂಪಿಸಲು ಅಧಿವೇಶನವನ್ನು ಸೂಕ್ಷ್ಮವಾಗಿ ವಿನ್ಯಾಸಗೊಳಿಸಲಾಗಿದೆ.




## IV ನಿಯಮಗಳು 2021 ರ ಅವಲೋಕನ

ಒಳನಾಡಿನ ಹಡಗು ನಿಯಮಗಳು 2021 ಭಾರತದಾದ್ಯಂತ ಒಳನಾಡಿನ ಹಡಗುಗಳ ಕಾರ್ಯಾಚರಣೆಯನ್ನು ಆಧುನೀಕರಿಸುವ ಮತ್ತು ಸುಗಮಗೊಳಿಸುವ ಉದ್ದೇಶದಿಂದ ಜಲಸಾರಿಗೆ ನಿಯಮಗಳ ಗಮನಾರ್ಹ ಕೂಲಂಕುಷ ಪರಿಶೀಲನೆಯನ್ನು ಪ್ರತಿನಿಧಿಸುತ್ತದೆ. ಈ ನಿಯಮಗಳು ಒಳನಾಡಿನ ಜಲಸಾರಿಗೆ ವಲಯದಲ್ಲಿ ಸುರಕ್ಷತೆ, ಕಾರ್ಯಾಚರಣೆಯ ದಕ್ಷತೆ ಮತ್ತು ಪರಿಸರ ಅನುಸರಣೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿವೆ.

ಕಾರ್ಯಾಗಾರದಲ್ಲಿ, ಭಾರತ್ ಸಾಗರ ಸಮೀಕ್ಷೆ ಮತ್ತು ಪ್ರಮಾಣೀಕರಣ ಮತ್ತು ನಿರ್ಮಾನ್ ಮರೈನ್ ಸೊಲ್ಯೂಷನ್ಸ್ ಎಎಲ್ಪಿ **IV** ನಿಯಮಗಳು, 2021 ರ ಸಮಗ್ರ ವಿಮರ್ಶೆಯನ್ನು ಒದಗಿಸಿತು, ಹಿಂದಿನ ನಿಯಮಗಳಿಂದ ಪ್ರಮುಖ ಬದಲಾವಣೆಗಳನ್ನು ಎತ್ತಿ ತೋರಿಸಿದೆ. ನವೀಕರಿಸಿದ ನಿಯಮಗಳು ಕಠಿಣ ಸುರಕ್ಷತಾ ಮಾನದಂಡಗಳು, ಹಡಗು ವಿನ್ಯಾಸಕ್ಕಾಗಿ ಹೊಸ ಅನುಸರಣೆ ಅವಶ್ಯಕತೆಗಳು ಮತ್ತು ವರ್ಧಿತ ಕಾರ್ಯಾಚರಣೆ ಪ್ರೋಟೋಕಾಲ್ಗಳನ್ನು ಪರಿಚಯಿಸುತ್ತವೆ. ಈ ಬದಲಾವಣೆಗಳು ರಾಷ್ಟ್ರೀಯ ಕಡಲ ಸುರಕ್ಷತಾ ಗುರಿಗಳು ಮತ್ತು ವಿಶಾಲ ಕಡಲ ನೀತಿ ಚೌಕಟ್ಟಿನೊಂದಿಗೆ ಹೇಗೆ ಹೊಂದಿಕೆಯಾಗುತ್ತವೆ ಎಂಬುದರ ಬಗ್ಗೆ ಭಾಗವಹಿಸುವವರಿಗೆ ವಿವರಿಸಲಾಯಿತು.

## ಕೆ.ಎಂ.ಬಿಯ ಅಧಿಸೂಚನೆಗಳು

- ಒಳನಾಡು ಜಲಸಾರಿಗೆ ನಿಯಮಗಳು 2021 ರ ಅನುಷ್ಠಾನದ ನಿರೀಕ್ಷೆಯಲ್ಲಿ, ಕರ್ನಾಟಕ ಜಲಸಾರಿಗೆ ಮಂಡಳಿ ಹಲವಾರು ಪ್ರಮುಖ ಅಧಿಸೂಚನೆಗಳನ್ನು ಹೊರಡಿಸಲಿದೆ. ಈ ಅಧಿಸೂಚನೆಗಳು ಅನುಸರಣೆಗಾಗಿ ನಿರ್ದಿಷ್ಟ ಮಾರ್ಗಸೂಚಿಗಳು ಮತ್ತು ಗಡುವು ಒದಗಿಸುತ್ತವೆ, ಜೊತೆಗೆ ಯಾವುದೇ ಹೆಚ್ಚುವರಿ ರಾಜ್ಯ ಮಟ್ಟದ ನಿಯಮಗಳು ಅಥವಾ ತಿದ್ದುಪಡಿಗಳ ನವೀಕರಣಗಳನ್ನು ಒದಗಿಸುತ್ತವೆ.
- ಭಾರತ್ ಸಾಗರ ಸಮೀಕ್ಷೆ ಮತ್ತು ಪ್ರಮಾಣೀಕರಣ ಮತ್ತು ನಿರ್ಮಾನ್ ಮರೈನ್ ಸೊಲ್ಯೂಷನ್ಸ್ ಎಲ್ಎಲ್ಪಿ ನಿರೀಕ್ಷಿತ ಅಧಿಸೂಚನೆಗಳ ಅವಲೋಕನವನ್ನು ಒದಗಿಸಿತು, ಮಾಹಿತಿ ಮತ್ತು ಪೂರ್ವಭಾವಿಯಾಗಿ ಉಳಿಯುವ ಮಹತ್ವ ಬಗ್ಗೆ ತಿಳಿಸಿದರು. ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ನವೀಕರಣಗಳಿಗಾಗಿ ನಿಯಮಿತವಾಗಿ ಪರಿಶೀಲಿಸುವಂತೆ ಮತ್ತು ಅವುಗಳನ್ನು ತಮ್ಮ ಕಾರ್ಯಾಚರಣೆಯ ಯೋಜನೆ ಮತ್ತು ಅನುಸರಣಾ ಕಾರ್ಯತಂತ್ರಗಳಲ್ಲಿ ಸಂಯೋಜಿಸುವಂತೆ ಅವರು ಅಧಿಕಾರಿಗಳಿಗೆ ಸಲಹೆ ನೀಡಿದರು.
- ಈ ಸಹಯೋಗದ ಪ್ರಯತ್ನವು ಕರ್ನಾಟಕದ ಒಳನಾಡಿನ ಜಲಮಾರ್ಗಗಳಲ್ಲಿ ಜಲಸಾರಿಗೆ ಸುರಕ್ಷತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ, ಅಂತಿಮವಾಗಿ ಭಾರತದ ಕಡಲ ವಲಯದ ವಿಶಾಲ ಗುರಿಗಳನ್ನು ಬೆಂಬಲಿಸುತ್ತದೆ.




Gogha-Hazira
04 Lane




SAGARMALA
Maritime States Development Council Meeting
Action by: Ministry of Defence





